**O.S. 282-17** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 10.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್ ಎಂ ಎಸ್ ವಕೀಲರಿಂದಃ**

3. ಪ್ರತಿವಾದಿ 1 ರಿಂದ 6 ರವರು ಎಲ್ಲರೂ ಸೇರಿ, ಪ್ರತಿವಾದಿ 7 ಹಾಗೂ 8 ರವರಿಗೆ ದಾವಾ ಆಸ್ತಿ ಕ್ರಮಸಂಖ್ಯೆಃ 2, ರ 1 ಮಹಡಿ ಯನ್ನು ಮಾರಾಟ ಮಾಡಿದ್ದೇವೆ. ಉಳಿದ ಭಾಗವನ್ನು ಬ್ಯಾಂಕಿನವರು ಪ್ರತಿವಾದಿ -10 ರವರು ಹರಾಜು ಮಾಡಿ ಸಾಲದ ಹಣಕ್ಕೆ ಜಮಾ ಮಾಡಿಕೊಂಡಿರುತ್ತಾರೆ. ಪ್ರತಿವಾದಿ 1 ರಿಂದ 6 ರವರು, ತಮ್ಮ ಅವಿಭಾಜ್ಯ 6/7 ಅವಿಭಾಜ್ಯ ಹಕ್ಕನ್ನು 1 ನೇ ಮಹಡಿಯಲ್ಲಿ ಪ್ರತಿವಾದಿ 7 ಹಾಗೂ 8 ರವರಿಗೆ ಮಾರಾಟ ಮಾಡಿದ್ದೇವೆ ಅಂದರೆ ಸರಿ. ವಾದಿಗಳಿಗೆ ಶೇ. 1/7 ಅಂಶ ಪಾಲು ಅವಿಭಾಜ್ಯ ಹಕ್ಕು 1 ನೇ ಮಹಡಿಯಲ್ಲಿತ್ತು. ಬಿಡನಾಳದಲ್ಲಿರುವ ಕ್ರಮಸಂಖ್ಯೆಃ 4 ರ, 10 ಗುಂಟೆಯಲ್ಲಿ ವಾಣಿಜ್ಯ ಮಳಿಗೆಗಳನ್ನು ಶಿವಶಂಕರ ರವರು ಕಟ್ಟಿದ್ದಾರೆ, ಆದರೆ ಪೂರ್ಣವಾಗಿಲ್ಲ. ಸದರಿ ಕಟ್ಟಡಕ್ಕೆ ನಮ್ಮ ಸ್ವಂತ ಕೊಡುಗೆ ಇಲ್ಲ. ಶಿವಶಂಕರ ಮರಣ ಹೊಂದಿದ ನಂತರ ನಾನು ಸ್ವಲ್ಪ ಹಣ ಕೊಟ್ಟು ಪೂರ್ಣ ಮಾಡಿದ್ದೇನೆ. ಅದರ ಬಗ್ಗೆ ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ. ಕ್ರಮಸಂಖ್ಯೆಃ 4 ರಲ್ಲಿ ಪಿಲ್ಲರ ಮಾತ್ರ ಹಾಕಿದ್ದರು, ಅರ್ ಸಿ ಸಿ ಸ್ಲಾಬ್ ನಾನು ಹಾಕಿದ್ದೇನೆ. ಈ ಮಾಹಿತಿಯನ್ನು ನಮ್ಮ ವಕೀಲರಿಗೆ ಪ್ರತಿವಾದ ಪತ್ರ ಸಲ್ಲಿಸುವಾಗ ನೀಡಿಲ್ಲ. ನಾನು ಹಣ ಹಾಕಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ದಾವಾ ಆಸ್ತಿ ಕ್ರಮಸಂಖ್ಯೆಃ 5, ದಿಃ 8.5.1992 ರ ಪೂರ್ವ ಭಾಗವನ್ನು ಖರೀದಿ ಮಾಡಿದ್ದೇನೆ ಅಂದರೆ ಸರಿ. ಸದರಿ ಖರೀದಿ ಪತ್ರ ಹಾಜರಪಡಿಸಿರುವ ಬಗ್ಗೆ ನೆನಪಿಲ್ಲ. ಕ್ರಮ ಸಂಖ್ಯೆಃ 5 ರ ಸರ್ವೆ ನಂಃ 132 ಬ, ಪ್ಲಾಟ ನಂಃ 4 ಅಂದರೆ ಸರಿ. ಸದರಿ ಖರೀದಿ ಹಣ 77 ಸಾವಿರ ರೂ. ಅಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆಃ 5 ನ್ನು ಖರೀದಿ ಮಾಡುವಾಗ ನನ್ನ ಮದುವೆಯಾಗಿರಲಿಲ್ಲ ಹಾಗೂ ನೌಕರಿಯಾಗಿರಲಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸ್ವಂತ ಆದಾಯವಿತ್ತು ಎಂದು. ನಾನು ಖರೀದಿ ಮಾಡುವ ಕಾಲಕ್ಕೆ ಆದಾಯವಿದ್ದ ಬಗ್ಗೆ ಯಾವ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ನನಗೆ ಮದುವೆ ಹಾಗೂ ನೌಕರಿಗಿಂತ ಮುಂಚೆ ಆದಾಯವಿತ್ತು ಅಂತಾ ವಕೀಲರಿಗೆ ಮಾಹಿತಿ ನೀಡಿಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆಃ 5 ನ್ನು ನನ್ನ ತಂದೆ ಪ್ರೀತಿ - ವಿಶ್ವಾಸದಿಂದ ಹಣ ಕೊಟ್ಟು ನನ್ನ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ.

**O.S. 282-17** **DW-1**

ಮದುವೆಗಿಂತ ಮುಂಚೆ ನಾನು ತಂದೆ ಸಂರಕ್ಷಣೆಯಲ್ಲಿದ್ದೆನು ಅಂದರೆ ಸರಿ.ದಾವಾ ಆಸ್ತಿ ಕ್ರಮ ಸಂಖ್ಯೆ: 5 ನ್ನು ನನ್ನ ಸ್ವಂತ ಹಣದಿಂದ ಖರೀದಿ ಮಾಡಿಲ್ಲ, ನನ್ನ ತಂದೆ ಹಣದಿಂದ ಖರೀದಿ ಮಾಡಿದ್ದೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮಸಂಖ್ಯೆ: 5 ಪಶ್ಚಿಮ ಭಾಗದ ಆಸ್ತಿಯನ್ನು ದಿಃ 8.5.1992 ರಂದು ನನ್ನ ತಾಯಿ ಖರೀದಿ ಮಾಡಿದ್ದಾಳೆ ಅಂದರೆ ಸರಿ. ಇದನ್ನು ಸಹ 77 ಸಾವಿರ ರೂ. ಗಳಿಗೆ ಖರೀದಿ ಮಾಡಲಾಗಿದೆ ಅಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ: 5 ನ್ನು ಓಂಕಾರಪ್ಪ ಫಕ್ಕೀರಪ್ಪ ಗಂಜಿ ರವರಿಂದ ಖರೀದಿ ಮಾಡಲಾಗಿದೆ ಅಂದರೆ ಸರಿ. ನನ್ನ ತಾಯಿ ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ, ಹಾಗೂ ನೌಕರಿ ಮಾಡುತ್ತಿರಲಿಲ್ಲ ಅಂದರೆ ಸರಿ. ನನ್ನ ತಾಯಿ ನಮ್ಮ ತಂದೆಯ ಆದಾಯದ ಮೇಲೆ ಅವಲಂಬನೆಯಾಗಿದ್ದರೂ ಅಂದರೆ ಸರಿಯಲ್ಲ. ಅವರಿಗೆ ಭಾಡಿಗೆ ಬರುತ್ತಿತ್ತು. ನಮ್ಮ ತಾಯಿ, ತಂದೆಯ ಸಂರಕ್ಷಣೆಯಲ್ಲಿದ್ದರು. ದಾವಾ ಆಸ್ತಿ ಕ್ರಮ ಸಂಖ್ಯೆ: 5 ಪಶ್ಚಿಮ ಭಾಗವನ್ನು ನಮ್ಮ ತಂದೆ ಹಣ ಕೊಟ್ಟು ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ. ಅದರ ಸಂಪೂರ್ಣ ಹಣ ನಮ್ಮ ತಂದೆ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಾಯಿಗೆ ಯಾವುದೇ ಆದಾಯವಿರಲಿಲ್ಲ ಅಂದರೆ ಸರಿಯಲ್ಲ. ನನ್ನ ತಾಯಿ ದಾವಾ ಆಸ್ತಿ ಕ್ರಮ ಸಂಖ್ಯೆ: 5 ಪಶ್ಚಿಮ ಭಾಗವನ್ನು ನಿಪಿ.26 ರ ಮೂಲಕ ನನಗೆ ಬಕ್ಷಿಸ ಮಾಡಿದ್ದಾರೆ ಅಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ: 5 ರ ಪೂರ್ವ ಭಾಗದ್ದು ನಾನು ಖರೀದಿ ಮಾಡಿದ್ದೇನೆ, ಪಶ್ಚಿಮ ಭಾಗದ್ದು ಬಕ್ಷಿಸ ಬಂದಿದ್ದರಿಂದ ಅದು, ನನ್ನ ಸ್ವಂತ ಆಸ್ತಿ ಎಂದು ಹೇಳುತ್ತಿದ್ದೇನೆ. ನನ್ನ ತಾಯಿಗೆ ಪಶ್ಚಿಮ ಭಾಗದ ಆಸ್ತಿಯನ್ನು ಬಕ್ಷಿಸ ಮಾಡಲು ಅಧಿಕಾರವಿಲ್ಲ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ಯಾರಾ ನಂ: 9 ರಲ್ಲಿ ಹೇಳಿರುವ ನನ್ನ ತಾಯಿಯ ಅಜ್ಜಿ ಹೆಸರು ಪಾರ್ವತೆವ್ವ ಗೋಧಿ. ಪಾರ್ವತೆವ್ವ ಗೋಧಿರವರು ನನ್ನ ತಾಯಿ ಕಡೆಯಿಂದ ಸಂಬಂಧಿಕರು. ಪ್ರತಿವಾದ ಪತ್ರವನ್ನು ಸಲ್ಲಿಸುವಾಗ ಪಾರ್ವತೆವ್ವ ಗೋಧಿ ರವರ ಹೆಸರು ಹೇಳಿಲ್ಲ. ಪಾರ್ವತೆವ್ವ ಗೋಧಿ ರವರ ಹೆಸರಿನಲ್ಲಿರುವ ದಾಖಲೆ ಹಾಜರಪಡಿಸಿದ್ದೇನೆ, ನೋಂದವಾಗಿರುವ ಬಗ್ಗೆ ಗೊತ್ತಿಲ್ಲ. ನಮ್ಮ ತಾಯಿ ಅಜ್ಜಿ ಬಕ್ಷಿಸ ಪತ್ರ ಮಾಡಿದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ. ಬಕ್ಷಿಸ ಪತ್ರ ನೋಂದವಾಗಿರುವ ಬಗ್ಗೆ ಗೊತ್ತಿಲ್ಲ. ಬಕ್ಷಿಸ ಮಾಡಿದ ಆಸ್ತಿಯ ನಂಬರ, ವಿಸ್ತೀರ್ಣ ಹಾಗೂ ಚಕ್ಕುಬಂದಿ ಹೇಳಲು ಬರುವುದಿಲ್ಲ. ಬಕ್ಷಿಸ ಪತ್ರದ ಅಸಲು ಪ್ರತಿ ನನ್ನ ತಾಯಿ ಬಳಿ ಇದ್ದ ಬಗ್ಗೆ ಗೊತ್ತಿಲ್ಲ. ಬಕ್ಷಿಸ ಮಾಡಿದ ಆಸ್ತಿಯಿಂದ ತಿಂಗಳಿಗೆ ಹಾಗೂ ವರ್ಷಕ್ಕೆ ಎಷ್ಟು ಭಾಡಿಗೆ ಬರುತ್ತಿತ್ತು ಅಂತಾ ಗೊತ್ತಿಲ್ಲ. ನನ್ನ ತಾಯಿಯಾಗಲಿ ಅಥವಾ ನನ್ನ ತಾಯಿಯ ಅಜ್ಜಿಯಾಗಲಿ ಎಷ್ಟ ಭಾಡಿಗೆ ಬರುತ್ತಿದೆ ಎಂದು ಲೆಕ್ಕ ಇಟ್ಟಿಲ್ಲ.

ಬಕ್ಷಿಸ ಆಸ್ತಿಯಲ್ಲಿ ಎಷ್ಟು ಜನ ಭಾಡಿಗೆದಾರರು ಇದ್ದಾರೆಂದು ಗೊತ್ತಿಲ್ಲ ಹಾಗೂ ಭಾಡಿಗೆ ಪತ್ರವನ್ನು ನೋಡಿಲ್ಲ. ಸದರಿ ಆಸ್ತಿಯಲ್ಲಿ ಯಾರು ಭಾಡಿಗೆದಾರರುವು ಇರಲಿಲ್ಲ, ಹಾಗೂ ಭಾಡಿಗೆ ಹಣ ಬರುತ್ತಿರಲಿಲ್ಲ ಅಂದರೆ ಸರಿಯಲ್ಲ. ನಮ್ಮ ತಾಯಿ ಬಕ್ಷಿಸ ಆಸ್ತಿಯ ಭಾಡಿಗೆ ಹಣದಿಂದ ಖರೀದಿ ಮಾಡಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಭಾಡಿಗೆದಾರರು ಜೀವಂತವಿರುವ ಬಗ್ಗೆ ಗೊತ್ತಿಲ್ಲ. ನಮ್ಮ ತಾಯಿ ಯಾರ ಕಡೆಯಿಂದ ಎಷ್ಟು ಹಣವನ್ನು ಕೈಗಡವಾಗಿ ತೆಗೆದುಕೊಂಡಿದ್ದಾರೆಂದು ಹೇಳಲು ಬರುವುದಿಲ್ಲ. ನನ್ನ ತಾಯಿ ಅವರ ಸಂಬಂಧಿಕರ ಕಡೆಯಿಂದ ಕೈಗಡವಾಗಿ ಹಣ ತೆಗೆದುಕೊಂಡಿದ್ದರು, ಈಗ ಅವರು ಯಾರು ಜೀವಂತವಿಲ್ಲ. ಕೈಗಡ ಕೊಟ್ಟವರ ಸಂಬಂಧಿಕರಿದ್ದಾರೆ, ಅವರು ಯಾರು ಕೋರ್ಟಿಗೆ ಬಂದು ಸಾಕ್ಷಿ ನುಡಿಯಲು ತಯಾರಿಲ್ಲ. ನನ್ನ ತಾಯಿ ಭಾಡಿಗೆ ಹಾಗೂ ಕೈಗಡ ಹಣದಿಂದ ಖರೀದಿ ಮಾಡಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಗೂ ನನ್ನ ತಾಯಿ ಖರೀದಿ ಮಾಡಲು ನನ್ನ ತಂದೆ ಹಣ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಿಪಿ.26 ಬಕ್ಷಿಸ ಪತ್ರದಲ್ಲಿರುವ ಆಸ್ತಿಯನ್ನು ಸ್ವೀಕಾರ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ.26 ರಲ್ಲಿ ನಾನು ಸ್ವೀಕಾರ ಮಾಡಿದ ಬಗ್ಗೆ ಎಲ್ಲಿಯೂ ಹಿಂಬರಹ ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮಸಂಖ್ಯೆ 5 ನ್ನು ಕಬಳಿಸಲು ನಾನು ಹಾಗೂ ನಮ್ಮ ತಾಯಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1994 ರಿಂದ ಇಲ್ಲಿಯವರೆಗೂ ನಾನು ಆದಾಯ ತೆರಿಗೆ ಕಟ್ಟುತ್ತಿದ್ದೇನೆ, ಹಾಗೂ ಪ್ರತಿವಾದಿ ವರ್ಷ ಆದಾಯ ತೆರಿಗೆ ರಿಟರ್ನ್ಸ ಸಲ್ಲಿಸುತ್ತಿದ್ದೇನೆ. ಬಕ್ಷಿಸ ಪತ್ರದ ಬಗ್ಗೆ ಆದಾಯ ತೆರಿಗೆಯಲ್ಲಿ ತೋರಿಸಿಲ್ಲ. 9 ನೇ ಪ್ರತಿವಾದಿ ಖಾಸಗಿಯಾಗಿ ವೈದ್ಯ ವೃತ್ತಿ ಮಾಡುತ್ತಾರೆ. ಅವರು ವೈದ್ಯ ವೃತ್ತಿ ಮಾಡುತ್ತಿದ್ದಾಗಿನಿಂದಲೂ ಅವರು ಆದಾಯ ತೆರಿಗೆ ರಿಟರ್ನ್ಸ ಸಲ್ಲಿಸುತ್ತಿದ್ದಾರೆ. ನನ್ನ ಗಂಡ ಆದಾಯ ಹಾಗೂ ಖರ್ಚುಗಳ ಬಗ್ಗೆ Books of Account Maintain ಮಾಡಿದ್ದಾರೆ. ನನ್ನ ಗಂಡ ಜಂಟಿಯಾಗಿ ಖರೀದಿ ಮಾಡಿದ ಬಗ್ಗೆ Books of Account ದಲ್ಲಿ ತೋರಿಸಿದ್ದಾರೆ ಅದನ್ನು ಹಾಜರಪಡಿಸಿಲ್ಲ.

6. ದಾವಾ ಆಸ್ತಿ ಕ್ರಮಸಂಖ್ಯೆ 6 ರ ಮೂಲಕ ಮಾಲಿಕರು ಮೋತಿಲಾಲಸಾ ವಿಠಲಸಾ ಪಟ್ಟಣ ಹಾಗೂ ಇತರರು ಅಂದರೆ ಸರಿ. ಮೋತಿಲಾಲಸಾ ವಿಠಲಸಾ ಪಟ್ಟಣ ಹಾಗೂ ಶಿವಶಂಕರ ರವರ ನಡುವೆ ಖರೀದಿ ಕರಾರು ಪತ್ರವಾಗಿದ್ದು ಗೊತ್ತಿಲ್ಲ. ಶಿವಶಂಕರನಿಗೆ ಮೋಸ ಮಾಡಿ ಆತನಿಗೆ ಗೊತ್ತಿಲ್ಲದ ಹಾಗೆ ನಾನು ಹಾಗೂ ನನ್ನ ಗಂಡ ಮೋತಿಲಾಲಸಾ ವಿಠಲಸಾ ಪಟ್ಟಣ ರವರ ಕಡೆಯಿಂದ ಖರೀದಿ ಪತ್ರ ಬರೆಸಿಕೊಂಡಿದ್ದೇವೆ ಅಂದರೆ ಸರಿಯಲ್ಲ.

**O.S. 282-17 DW-1**

ಮೋತಿಲಾಲಸಾ ವಿಠಲಸಾ ಪಟ್ಟಣ ರವರ ಬ್ಯಾಂಕ ಖಾತೆ, ಕೆನರಾ ಬ್ಯಾಂಕ ಸ್ಟೇಶನ್ ರೋಡ ಹುಬ್ಬಳ್ಳಿ ಇದ್ದ ಬಗ್ಗೆ ಗೊತ್ತಿಲ್ಲ. ಸ್ಟೇಟ ಬ್ಯಾಂಕ ಆಫ್ ಹೈದರಾಬಾದ, ಕೊಪ್ಪಿಕರ ರೋಡ, ಹುಬ್ಬಳ್ಳಿಯಲ್ಲಿ ನನ್ನದು ಪ್ರತಿವಾದಿ 2 ಪೋತಿ ಪ್ರತಿವಾದಿ ನಂಃ 1 ಹಾಗೂ ಶಿವಶಂಕರದು ಖಾತೆ ಇತ್ತು. 4 ಜನ ಅತಿ ವಿಶ್ವಾಸವುಳ್ಳವರು ಅಂದರೆ ಸರಿ. ನಿಪಿ.27 ರಲ್ಲಿ ಪೇಜ ನಂಃ 6 ರಲ್ಲ 10 ಲಕ್ಷ ರೂ. 12 ಲಕ್ಷ ರೂ. ಚೆಕ್ ಕೊಟ್ಟ ಬಗ್ಗೆ ನಮೂದು ಇಲ್ಲ ಅಂದರೆ ಸರಿ. 10-12 ಲಕ್ಷ ರೂ, ಚೆಕ್ ನ್ನು ನಾನೇ ಕೊಟ್ಟಿದ್ದೇನೆ. ಚೆಕ್ ಕೌಂಟರ ಪೈಲ ನನ್ನ ಬಳಿ ಇಲ್ಲ. 4 ಜನ ಹೆಸರು ಇರುವ ಬ್ಯಾಂಕ ಅಕೌಂಟನ್ನು ಶಿವಶಂಕರ ನೋಡಿಕೊಳ್ಳುತ್ತಿದ್ದನು. ಯಾರು ಖಾತೆಗಳನ್ನು ನೋಡಿಕೊಳ್ಳುತ್ತಾರೆ ಅವರ ಬಳಿ ಚೆಕ್ ಬುಕ್ ಇರುತ್ತದೆ ಅಂದರೆ ಸರಿ. 10-12 ಲಕ್ಷ ರೂ. ಚೆಕ್ ನ್ನು ನಾನು ಕೊಹುಟ್ಟಿದ್ದೇನೆ ಅಂತಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನೇ ಸದರಿ 2 ಚೆಕ್ ನ ಹಣವನ್ನು ಆರ್ ಟಿ ಜಿ ಎಸ್ ಮೂಲಕ ಜಮಾ ಮಾಡಿದ್ದೇನೆ. ನಾನು ಆರ್ ಟಿ ಜಿ ಎಸ್ ಮಾಡಿದ ಬಗ್ಗೆ ಸ್ಟೇಟಮೆಂಟ ಕೊಟ್ಟಿದ್ದೇನೆ. 10 ಹಾಗೂ 12 ಲಕ್ಷ ರೂ, ಚೆಕ್ ಕೊಟ್ಟ ಬಗ್ಗೆ ನಿಪಿ.29 ರಲ್ಲಿ ನಮೂದು ಇದೆ ಅಂದರೆ ಸರಿ. ಸದರಿ ಹಣವನ್ನು ನನ್ನ ಖಾತೆಯಿಂದ ಸದರಿ ಖಾತೆಗೆ ವರ್ಗಾವಣೆ ಮಾಡಿದ್ದೇನೆ. ಆರ್ ಟಿ ಜಿ ಎಸ್ ಮಾಡಿದ ಬಗ್ಗೆ ಬ್ಯಾಂಕಿನವರು ಸ್ವೀಕೃತಿ ಕೊಡುತ್ತಾರೆ ಅಂದರೆ ಸರಿ, ಅದು ನನ್ನ ಬಳಿ ಇದೆ. 22 ಲಕ್ಷ ರೂ. ಹಣವನ್ನು ಶಿವಶಂಕರ ರವರು ಚೆಕ್ ಮೂಲಕ ಕೊಟ್ಟಿದ್ದಾರೆ ಅಂದರೆ ನಾನು ಹಾಕಿದ ಹಣವನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ. ನಿಪಿ.29,ರಲ್ಲಿ ನಾನು ಹಣ ಕೊಟ್ಟ ಬಗ್ಗೆ ನಮೂದು ಇಲ್ಲ, ನಾನು ಅದಕ್ಕೆ ಪ್ರತ್ಯೇಕವಾಗಿ ದಾಖಲೆ ಹಾಜರಪಡಿಸಿದ್ದೇನೆ. ದಾವಾ ಆಸ್ತಿ ಕ್ರಮಸಂಖ್ಯೆ 6 ನ್ನು ಖರೀದಿ ಮಾಡಲು ನಾನು ಹಾಗೂ ನನ್ನ ಗಂಡ ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಿಪಿ.28 ರ ಮೂಲಕ ದಾವಾ ಆಸ್ತಿ ಕ್ರಮಸಂಖ್ಯೆ 6 ನುನ ಖರೀದಿ ಮಾಡಿದ್ದೇವೆ ಅಂದರೆ ಸರಿ. ಸ್ಟೇಟ ಬ್ಯಾಂಕ ಆಫ್ ಮೈಸೂರಿನಲ್ಲಿ ನನ್ನ ಹಾಗುಾ ನನ್ನ ಗಂಡನ ಹೆಸರು ಇದೆ. ನಿಪಿ.28 ರಲ್ಲಿ ಪೇಜ ನಂಃ 5 ಹಾಗೂ 6 ಗಳಲ್ಲಿ ಹೇಳಿರುವ ಹಣವನ್ನು ನಾನೇ ಕೊಟ್ಟಿದ್ದೇನೆ. ಪೇಜ 5 ಹಾಗೂ 6 ರಲ್ಲಿ ತೋರಿಸಿರುವ ಸ್ಟೇಟ ಬ್ಯಾಂಕ ಆಫ್ ಹೈದರಾಬಾದ, ಕೊಪ್ಪಿಕರ ರೋಡ, ಹುಬ್ಬಳ್ಳಿಯಲ್ಲಿರುವ 4 ಲಕ್ಷ ಹಾಗೂ 3 ಲಕ್ಷ ರೂ. ಹಣವನ್ನು ಶಿವಶಂಕರ ಕೊಟ್ಟಿದ್ದಾನೆ ಅಂದರೆ ಸರಿಯಲ್ಲ. ಸ್ಟೇಟ ಬ್ಯಾಂಕ ಆಫ್ ಮೈಸೂರು, ಚೆಕ್ ನ್ನು ನಾನೇ ಕೊಟ್ಟಿದ್ದೇನೆ. 16 ಲಕ್ಷ ರೂ. ಹಣ ಕೊಟ್ಟ ಬಗ್ಗೆ ನಿಪಿ.29 ರಲ್ಲಿ ಕಾಣಿಸಲಾಗಿದೆ ಅಂದರೆ ಸರಿ. ದಾವಾ ಆಸ್ತಿ ಕ್ರಮಂಸಖ್ಯೆ 6 ನ್ನು ಖರೀದಿ ಮಾಡಲು ನನ್ನ ಜೊತೆಗೆ ಶಿವಶಂಕರ ರವರು ಸಹ 29 ಲಕ್ಷ ರೂ. ಹಣ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ.

**O.S. 282-17** **DW-1**

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.